104

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಶೀಲ್ ಜಿ ನಮೋಶಿ, ಶ್ರೀ ಎಸ್ ವ್ಹಿ ಸಂಕನೂರ ಹಾಗೂ ಇತರರು ನಿಯಮ 72 ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಗೃಹ ಸಚಿವರ ಹೇಳಿಕೆ:**

**ಸೂಚನೆ:-**

ಶಾಲಾ ಕಾಲೇಜುಗಳಿಗೆ ಸುರಕ್ಷತಾ ಗುಣಮಟ್ಟದ ಹಿತ ದೃಷ್ಟಿಯಿಂದ ರಾಜ್ಯದ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಿಂದ ಪರವಾನಿಗೆ ನೀಡುವಲ್ಲಿ ವಿಳಂಬ, ಭ್ರಷ್ಟಾಚಾರ ಹಾಗೂ ಪರವಾನಗಿ ನೀಡುವಲ್ಲಿ ಸರ್ಕಾರಿ ಶಾಲಾ ಕಾಲೇಜುಗಳಿಗೆ ಇರುವ ನಿಯಮಾವಳಿಗಳು ಅನುದಾನಿತ/ಅನುದಾನ ರಹಿತ ಶಾಲಾ ಕಾಲೇಜುಗಳಿಗೆ ಇರುವ ನೀತಿ ನಿಯಮಗಳ ನಿಯಮಾವಳಿಗಳ ನಡುವೆ ಆಗುತ್ತಿರುವ ಅನ್ಯಾಯದ ಕುರಿತು.

**ಉತ್ತರ:-**

ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ರಿಟ್ ಅರ್ಜಿ ಸಂಖ್ಯೆ: 483/2004 ರಲ್ಲಿ ದಿನಾಂಕ: 13-04-2009 ರ ಆದೇಶದಲ್ಲಿ The Lord Krishna Middle School, ಕುಂಭಕೋಣಂ ಜಿಲ್ಲೆ, ತಮಿಳುನಾಡು ಇಲ್ಲಿ ಸಂಭವಿಸಿದ ಅಗ್ನಿ ದುರಂತಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ನಿರ್ದೇಶನ ನೀಡಿರುತ್ತದೆ:-

**3.1 (x) Fire Safety Measures in schools:**

x. The Fire and Rescue Department shall frame guidelines with "Do's and Don't's for Schools and issue a fitness certificate, which shall be renewed periodically.

**3.4.1 Clearance & Certificates:**

i. Every school shall have a mandatory fire safety inspection by the Fire and Rescue Services Department followed by issuance of a 'No Objection Certificate" to the school as a mandatory requirement for granting permission for establishing or continuation of a school.

ii. An Inspection Team consisting of experts like a Civil Engineer, a Health Officer, a Revenue Officer, a Psychologist, a Fire Officer, a local body officer and a development officer besides the educational authorities shall carry inspection and assessment of infrastructural facilities before the commencement of each academic year. The Team shall submit its Inspection Report to the concerned district Chief Educational Officer.

ರಾಜ್ಯದಲ್ಲಿ ಬಹುಮಹಡಿ ಕಟ್ಟಡಗಳನ್ನು ನಿರ್ಮಿಸುವ ಪೂರ್ವದಲ್ಲಿ ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ. ಅದರಂತೆ, ನಿರಾಕ್ಷೇಪಣಾ

ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ಕಟ್ಟಡವನ್ನು ನಿರ್ಮಾಣ ಮಾಡಿ ಅಗ್ನಿಶಮನ ಮತ್ತು ಮುನ್ನೆಚ್ಚರಿಕಾ ಕ್ರಮಗಳನ್ನು ಸಮರ್ಪಕವಾಗಿ ಅಳವಡಿಸಿದ ನಂತರ ಕ್ಲಿಯರೆನ್ಸ್ ಪ್ರಮಾಣ ಪತ್ರವನ್ನು ನೀಡಲಾಗುತ್ತಿದ್ದು, ಪ್ರತೀ ಎರಡು ವರ್ಷಗಳಿಗೊಮ್ಮೆ ನವೀಕರಣ ಮಾಡುವ ಪದ್ಧತಿ ಜಾರಿಯಲ್ಲಿರುತ್ತದೆ.

ಮುಂದುವರೆದು, ಈಗಾಗಲೇ ನಿರ್ಮಾಣ ಮಾಡಲಾಗಿರುವ ಬಹುಮಹಡಿ ಕಟ್ಟಡವಲ್ಲದ ಶೈಕ್ಷಣಿಕ ಕಟ್ಟಡಗಳಿಗೆ ಕೋರಿಕೆ ಮೇರೆಗೆ ವಿಧ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರುಗಳ ಸುರಕ್ಷತೆ ನಿಟ್ಟಿನಲ್ಲಿ ಕಾಲ ವಿಳಂಬವಿಲ್ಲದೇ ಸಲಹಾ ಪತ್ರ ಮತ್ತು ಸಮಾಪನಾ ಪತ್ರಗಳನ್ನು ನೀಡಲಾಗುತ್ತಿದೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ, ಇವರ ಸುತ್ತೋಲೆ ಸಂಖ್ಯೆ: ಇಪ 46 ಎಸ್‌ಹೆಚ್‌ಎಸ್ 2020, ದಿನಾಂಕ: 10-11-2020 ರಲ್ಲಿ ರಾಜ್ಯದಲ್ಲಿನ ಖಾಸಗಿ ಅನುದಾನಿತ/ಅನುದಾನ ರಹಿತ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಹೆಚ್ಚುವರಿ ವಿಭಾಗಗಳನ್ನು ಅನುಮತಿಸುವ ಸಂದರ್ಭದಲ್ಲಿ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರದ ಅಗತ್ಯತೆ ಕುರಿತು ಮಾರ್ಗಸೂಚಿಗಳನ್ನು ಹೊರಡಿಸಿರುತ್ತಾರೆ. ಅದರಲ್ಲಿ ಪ್ರಮುಖವಾಗಿ "ಹಳೆಯ ಕಟ್ಟಡಗಳಲ್ಲಿ ನಡೆಸಲ್ಪಡುತ್ತಿರುವ ಶಾಲಾ/ಕಾಲೇಜುಗಳ ಶಿಕ್ಷಣ ಸಂಸ್ಥೆಗಳು ಅಗ್ನಿಶಾಮಕ ಇಲಾಖೆಯಿಂದ ಪಡೆದಿರುವಂತಹ ಸಲಹಾ ಪತ್ರ(Advisory Certificate) ವನ್ನು ಮತ್ತು ಸಮಾಪನಾ ಪತ್ರ(Compliance Certificate)ವನ್ನು ಪ್ರತೀ 02 ವರ್ಷಗಳಿಗೊಮ್ಮೆ ನವೀಕರಿಸಿಕೊಳ್ಳತಕ್ಕದ್ದು." ಎಂದು ತಿಳಿಸಲಾಗಿದೆ.

ರಾಜ್ಯದಲ್ಲಿನ 15 ಮೀಟರ್‌ಗಳಿಗಿಂತ(Low rise) ಕಡಿಮೆ ಎತ್ತರದ ಸರ್ಕಾರಿ, ಅರೆ ಸರ್ಕಾರಿ, ಖಾಸಗಿ, ಅನುದಾನಿತ ಹಾಗೂ ಅನುದಾನ ರಹಿತ ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜು ಕಟ್ಟಡಗಳ ಪರಿವೀಕ್ಷಣೆ ನಡೆಸಿ, ಸಲಹಾ ಹಾಗೂ ಸಮಾಪನಾ ಪತ್ರವನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸಲಾದ ವರದಿಯನ್ವಯ ಸಂಬಂಧಪಟ್ಟ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ನಿಗದಿತ ಸರ್ಕಾರಿ ಶುಲ್ಕ ಪಾವತಿಸಿಕೊಂಡು ವಿತರಿಸಲು ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 12 ಶಾಸನ 2023, ಬೆಂಗಳೂರು, ದಿನಾಂಕ:27-07-2023 ರಲ್ಲಿ ಅಗ್ನಿಶಾಮಕ ದಳ(ತಿದ್ದುಪಡಿ) ಅಧಿನಿಯಮ 2023 ಕಲಂ(13) ಕ್ಕೆ ತಿದ್ದುಪಡಿ ತಂದು, ಬಹುಮಹಡಿ ಕಟ್ಟಡದ ಎತ್ತರವನ್ನು 15 ಮೀ ನಿಂದ 21 ಮೀ ಗೆ ಹೆಚ್ಚಿಸಿ ಬಹುಮಹಡಿ ಕಟ್ಟಡದ ವ್ಯಾಖ್ಯಾನದ ವಿವರಣೆಯನ್ನು ನೀಡಲಾಗಿದೆ. ಅದರಂತೆ, ರಾಜ್ಯದಲ್ಲಿರುವ 21 ಮೀ ಮೇಲ್ಪಟ್ಟ ಎಲ್ಲಾ ಕಟ್ಟಡಗಳಿಗೆ ಕಡ್ಡಾಯವಾಗಿ ನಿರಾಕ್ಷೇಪಣಾ ಪತ್ರ ಪಡೆಯಬೇಕಾಗಿರುತ್ತದೆ.

ರಾಜ್ಯದಲ್ಲಿ ನಿರ್ಮಿಸಲಾಗಿರುವ/ನಿರ್ಮಿಸಲಾಗುವ ಸರ್ಕಾರಿ ಶಾಲಾ ಕಾಲೇಜುಗಳು ಮತ್ತು ವಿಶ್ವ ವಿದ್ಯಾಲಯಗಳ ಖಾಸಗಿ, ಅರೆ ಸರ್ಕಾರಿ ಕಟ್ಟಡಗಳು Low Rise ಕಟ್ಟಡಗಳಾಗಿದ್ದಲ್ಲಿ ಸಲಹಾ ಪ್ರಮಾಣ ಪತ್ರ, High Rise ಕಟ್ಟಡವಾಗಿದ್ದಲ್ಲಿ ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಕಡ್ಡಾಯವಾಗಿ ಪಡೆಯುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಗೆ ನಿರ್ದೇಶನ ನೀಡುವ ಬಗ್ಗೆ, ಅಗ್ನಿಶಾಮಕ ಇಲಾಖೆಯಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿದೆ.

ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರು ಸುತ್ತೋಲೆ ದಿನಾಂಕ: 24-07-2024 ರಲ್ಲಿ ಖಾಸಗಿ ಅನುದಾನಿತ, ಅನುದಾನ ರಹಿತ ಶಾಲೆಗಳಿಗೆ ಪ್ರಥಮ ಮಾನ್ಯತೆ/ಮಾನ್ಯತೆ ನವೀಕರಣವನ್ನು ನೀಡುವ ಸಮಯದಲ್ಲಿ ಅಗ್ನಿ ಸುರಕ್ಷತಾ ಕ್ರಮಗಳನ್ನು ಅಳವಡಿಸುವುದು ಮತ್ತು ಅಗ್ನಿ ಸುರಕ್ಷತಾ ಪ್ರಮಾಣ ಪತ್ರ ಹಾಗೂ ಸಮಾಪನಾ ಪತ್ರಗಳನ್ನು ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 334 ಎಸ್‌ಎಫ್‌ಬಿ 2023, ದಿನಾಂಕ: 15-07-2024 ರಂತೆ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಶೈಕ್ಷಣಿಕ ಕಟ್ಟಡಗಳಿಗೆ ಶುಲ್ಕವನ್ನು ಈ ಕೆಳಗಿನಂತೆ ಪಡೆಯಲಾಗುತ್ತಿದೆ.

| ಕ್ರ. ಸಂ. | ಶೈಕ್ಷಣಿಕ ಕಟ್ಟಡಗಳು | ಗ್ರಾಮಾಂತರ ಪ್ರದೇಶ | ನಗರ ಪ್ರದೇಶ |
|---|---|---|---|
| | | **ಸಲಹಾ ಪತ್ರ** | |
| 1. | 01 ರಿಂದ 6.99 ಮೀ. ಎತ್ತರದ ಕಟ್ಟಡಗಳಿಗೆ | ರೂ. 1,100/- | ರೂ. 5,500/- |
| 2. | 07 ರಿಂದ 20.99 ಮೀ. ಎತ್ತರದ ಕಟ್ಟಡಗಳಿಗೆ | ರೂ. 5,500/- | ರೂ. 22,000/- |
| 3. | **ಸಮಾಪನಾ ಪತ್ರದ ನವೀಕರಣ** | | |
| | ಶೈಕ್ಷಣಿಕ ಕಟ್ಟಡಗಳಿಗೆ ಪ್ರತಿ 02 ವರ್ಷಗಳಿಗೊಮ್ಮೆ | ಹೊಸ ಪ್ರಸ್ತಾವನೆ ರೂ. 1,000 | |

ಮುಂದುವರೆದು, ರಾಜ್ಯದಲ್ಲಿ ನಿರ್ಮಿಸಲಾಗಿರುವ Low Rise ಕಟ್ಟಡಗಳಿಗೆ ಅರ್ಜಿದಾರರಿಂದ ಕೋರಿಕೆ ಬಂದಲ್ಲಿ ಮಾತ್ರ ಕಟ್ಟಡವನ್ನು ಪರಿವೀಕ್ಷಣೆ ಮಾಡಿ ಅಗ್ನಿಶಮನ ಮತ್ತು ಮುನ್ನೆಚ್ಚರಿಕಾ ಕ್ರಮಗಳನ್ನು ಅಳವಡಿಸುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಕಾಲ ವಿಳಂಬವಿಲ್ಲದೇ ಪ್ರಮಾಣ ಪತ್ರಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸ್ವಯಂ ಪ್ರೇರಿತವಾಗಿ ಪರಿವೀಕ್ಷಣೆ ಹಾಗೂ ಪ್ರಮಾಣ ಪತ್ರವನ್ನು ವಿತರಿಸುತ್ತಿರುವುದಿಲ್ಲ.

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಛೇರಿ ನೃಪತುಂಗ ರಸ್ತೆ, ಬೆಂಗಳೂರು, ಇವರ ಸುತ್ತೋಲೆ ಸಂಖ್ಯೆ: ಸಿ7(2)ಪ್ರಾಶಿಅ: ಮಾನ್ಯತೆ ಷರತ್ತು 231/2018-19, ದಿನಾಂಕ: 06-06-2022 ರಲ್ಲಿ ಕಟ್ಟಡ ಸುರಕ್ಷತೆ ಮತ್ತು ಅಗ್ನಿ ಸುರಕ್ಷತೆ ಪ್ರಮಾಣ ಪತ್ರಗಳನ್ನು ಲೋಕೋಪಯೋಗಿ ಇಲಾಖೆ ಮತ್ತು ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ಪಡೆಯುವ ಬಗ್ಗೆ ಎಲ್ಲಾ ಶಾಲೆಗಳ ಮುಖ್ಯಸ್ಥರಿಗೆ ಮತ್ತು ಆಡಳಿತ ಮಂಡಳಿಗಳಿಗೆ ಸೂಚನೆ ನೀಡಿರುತ್ತಾರೆ.

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ: DPI-CPI0ADM0(OTH)/109/2025-SEC-ADM2-1723185, ದಿನಾಂಕ: 29-03-2025 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 03-03-2025 ರಂದು ನಡೆದ ಸಭೆಯಲ್ಲಿ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಅಧಿಕಾರಿಗಳಿಗೆ ಸರ್ಕಾರಿ ಶಾಲಾ ಕಟ್ಟಡಗಳಲ್ಲಿ ಅಳವಡಿಸಿಕೊಳ್ಳಬೇಕಾಗಿರುವ ಅಗ್ನಿಶಮನ ಮತ್ತು ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ 01 ರಿಂದ 10 ತರಗತಿ ವರೆಗಿನ ರಾಜ್ಯದಲ್ಲಿ ನಿರ್ಮಿಸಲಾಗಿರುವ ಒಟ್ಟು 46,460 ಶಾಲಾ ಕಟ್ಟಡಗಳನ್ನು ಪರಿವೀಕ್ಷಣೆ ಮಾಡುವಂತೆ ತಿಳಿಸಿರುತ್ತಾರೆ.

ಅದರಂತೆ ಈಗಾಗಲೇ 24,118 ಸರ್ಕಾರಿ ಶಾಲಾ ಕಟ್ಟಡಗಳನ್ನು ಫೈರ್ ಆಡಿಟ್ ಮಾಡಲಾಗಿರುತ್ತದೆ. ಪ್ರಸ್ತುತ ಶಾಲಾ-ಕಾಲೇಜು ಕಟ್ಟಡಗಳ ಫೈರ್ ಆಡಿಟ್ ಚಾಲ್ತಿಯಲ್ಲಿರುತ್ತದೆ. ಅನುದಾನ ರಹಿತ, ಅನುದಾನ ಸಹಿತ ಅಥವಾ ಸರ್ಕಾರಿ ಶಾಲಾ-ಕಾಲೇಜುಗಳಿಗೆ ಯಾವುದೇ ಭೇದ-ಭಾವ ಇಲ್ಲದೆ ಕಾನೂನು ಪ್ರಕಾರ ಕೆಲಸ ನಿರ್ವಹಿಸಲಾಗುತ್ತಿದೆ.

**ಸಂಖ್ಯೆ: ಹೆಚ್‌ಡಿ 252 ಎಸ್‌ಎಫ್‌ಬಿ 2025**

(ಡಾ. ಜಿ. ಪರಮೇಶ್ವರ)
ಗೃಹ ಸಚಿವರು